Sl. No.	Reference made by	Suggestions given	Action taken
		Doddathota, Bommaru	route Sulya-Madapadi via Jattipalla, Kodiyalebailu, Dugaladka from 15-3-2003 during morning and evening evening hours.

ಸೂಳ್ಯ ತಾಲ್ಲೂಕು ಕೇಂದ್ರದಲ್ಲಿ ಬಸ್‌ಡಿಪೋ ಪ್ರಾರಂಭ

1843(2096) ಶ್ರೀ ಎಸ್. ಅಂಗಾರ (ಸೂಳ್ಯ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪುತ್ತೂರು ಡಿಪೋದಲ್ಲಿ ಹೆಚ್ಚಿನ ವಾಹನಗಳಿಗೆ ನಿಲ್ಲಲು ಸರಿಯಾದ ವ್ಯವಸ್ಥೆ ಇಲ್ಲದೆ ಹೆಚ್ಚು ರೂಟ್‌ಗಳಲ್ಲಿ ಬಸ್ಸುಗಳನ್ನು ಓಡಿಸಲು ತುಂಬಾ ತೊಂದರೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು;

ಇ. ಸುಳ್ಯ ತಾಲ್ಲೂಕಿನಲ್ಲಿ ಓಡಾಡುವ ಬಸ್ಸುಗಳು ಪುತ್ತೂರು ಡಿಪೋ ಹೋಗಿಬರಲು ತುಂಬ ತೊಂದರೆ ಹಾಗೂ ನಷ್ಟವಾಗುತ್ತಿರುವುದರಿಂದ ಸುಳ್ಯ ತಾಲ್ಲೂಕು ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಈ. ಇದ್ದರೆ, ಎಷ್ಟು ಸಮಯದಲ್ಲಿ ಡಿಪೋವನ್ನು ತೆರೆಯಲಾಗುವುದು?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು)

ಅ. ಹೌದು.

ಆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪುತ್ತೂರು ತಾಲ್ಲೂಕಿನ ಕಮ್ಮಿಂಜೆ ಗ್ರಾಮದ ಮುಕ್ರುಂಪಾಡಿಯಲ್ಲಿ 8.15 ಎಕರೆ ಜಾಗವನ್ನು ಹೊಂದಿರುತ್ತದೆ. ಇಲ್ಲಿ ಸಂಸ್ಥೆಯ ವತಿಯಿಂದ ಘಟಕವನ್ನು ನಿರ್ಮಿಸುವ ಪ್ರಸ್ತಾವನೆಯಿದ್ದು, ಹಾಲಿ ಪುತ್ತೂರು ಘಟಕದ ಸಾರಿಗೆ ಕಾರ್ಯಾಚರಣೆಯನ್ನು ವರ್ಗಾಯಿಸುವ ಉದ್ದೇಶವೂ ಇರುತ್ತದೆ. ಇದರಿಂದಾಗಿ, ಹಾಲಿ ಇರುವ ತೊಂದರೆಗಳನ್ನು ನಿವಾರಿಸಬಹುದಾಗಿದೆ.

ಇ. ಇದೆ, ಘಟಕ ನಿರ್ಮಿಸುವ ಸಲುವಾಗಿ ಸೂಕ್ತ ಜಾಗವನ್ನು ಪಡೆದುಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

ಈ. ಸೂಕ್ತ, ಸ್ಥಳ ಪಡೆದ ನಂತರ ಪರಿಗಣಿಸಲಾಗುವುದು.